ನಾಲ್ಕನೇ ಗುರುವಾರ ಪ್ಲಾನಿಟೋರಿಯಂಗೆ ರಜೆ. ಆನಂದಭವನ ಮತ್ತು ಪ್ಲಾನಿಟೋರಿಯಂ ಎರಡೂ ಒಂದೇ ಆವರಣದಲ್ಲಿರುವುದರಿಂದ, ಒಮ್ಮೆ ಈ ಪ್ರದೇಶಕ್ಕೆ ಭೇಟಿ ನೀಡಿದರೆ, ಎರಡನ್ನೂ ನೋಡಿಬರಬಹುದು.

## ಅಜಾದ್ ಸ್ಮಾರಕ; ಆಲ್‌ಫ್ರೆಡ್ ಪಾರ್ಕ್

ಆನಂದಭವನದಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿದೆ ಆಲ್‌ಫ್ರೆಡ್ ಪಾರ್ಕ್. ಇದು ಸ್ವಾತಂತ್ರ್ಯ ಹೋರಾಟದ ಪ್ರಮುಖ ಕ್ರಾಂತಿಕಾರರಲ್ಲೊಬ್ಬರಾದ ಚಂದ್ರಶೇಖರ ಅಜಾದ್ ಹುತಾತ್ಮರಾದ ಸ್ಥಳ. ಜಾರ್ಜ್ ಟೌನ್ ಮತ್ತು ಟ್ಯಾಗೂರ್ ಟೌನ್ ನಡುವೆ ಇರುವ ಬೃಹತ್ ಉದ್ಯಾನ ಇದು.

1931ರ ಫೆಬ್ರುವರಿ 27ರಂದು ಬ್ರಿಟಿಷ್ ಸೈನ್ಯ ತನ್ನನ್ನು ಸುತ್ತುವರಿದಾಗ, ಪರಕೀಯರಿಂದ ಸಾಯಬಾರದು ಎಂದು ತೀರ್ಮಾನಿಸಿ ಇದೇ ಉದ್ಯಾನದ ಮರದ ಕೆಳಗೆ ನಿಂತು ತನ್ನ ಪಿಸ್ತೂಲಿನಿಂದಲೇ ಗುಂಡು ತಲೆಗೆ ಹಾರಿಸಿಕೊಂಡು ಚಂದ್ರಶೇಖರ ಅಜಾದ್ ಸಾವನ್ನಪ್ಪುತ್ತಾರೆ. ಅವರು ಸಾವನ್ನಪ್ಪಿದ ಮರದ ಕೆಳಗೆ ಅವರ ಕಂಚಿನ ಪುತ್ಥಳಿ ಸ್ಥಾಪಿಸಲಾಗಿದೆ.

1870ರಲ್ಲಿ ಅಲಹಾಬಾದ್‌ಗೆ ಭೇಟಿ ನೀಡಿದ್ದ ಬ್ರಿಟಿಷ್ ಅಧಿಕಾರಿ ಪ್ರಿನ್ಸ್ ಆಲ್‌ಫ್ರೆಡ್ ಅವರ ಹೆಸರು ಇಡಲಾಗಿದೆ. ಈ ಉದ್ಯಾನದಲ್ಲಿ ಅಜಾದ್ ಹುತಾತ್ಮರಾದ ನಂತರ, ಪಾರ್ಕ್ ಹೆಸರನ್ನು ಮರುನಾಮಕರಣ ಮಾಡಲಾಗಿದೆ.

## ಭೀಷ್ಮ ದೇವಾಲಯ

ಮಹಾಭಾರತದ ಭೀಷ್ಮರಿಗಾಗಿ ನಿರ್ಮಾಣ ಮಾಡಿರುವ ಭಾರತದ ಏಕೈಕ ದೇವಾಲಯ ಇದು. ಅಲಹಾಬಾದ್‌ನ ದಾರಾಗಂಜ್ ಸಮೀಪದ ಗಂಗಾನದಿಯ ದಂಡೆಯ ಮೇಲಿದೆ. ನಾಗ ವಾಸುಕಿ ದೇವಾಲಯದ ಸಮೀಪದಲ್ಲಿದೆ. ಗಂಗಾನದಿಯ ತಟದ ಮೇಲೆ ಗಂಗೆಯ ಪುತ್ರ ಭೀಷ್ಮರ ವಿಗ್ರಹ ಸ್ಥಾಪಿಸಿರುವುದು ವಿಶೇಷವಾಗಿದೆ. ಈ ಅಪರೂಪದ ದೇವಾಲಯವನ್ನು 1961ರಲ್ಲಿ ಇಲ್ಲಿನ ಹೈಕೋರ್ಟ್ ವಕೀಲ ಜೆ.ಆರ್. ಭಟ್ ಅವರು ಕಟ್ಟಿಸಿದರು.

ಈ ದೇವಾಲಯದಲ್ಲಿ 12 ಅಡಿ ಉದ್ದದ ಭೀಷ್ಮ ಪಿತಾಮಹ ಬಾಣಗಳ ಮೇಲೆ ಮಲಗಿರುವ ವಿಗ್ರಹವಿದೆ. ಇದನ್ನು ಮರಳುಕಲ್ಲಿನಿಂದ (ಸ್ಯಾಂಡ್ ಸ್ಟೋನ್) ನಿರ್ಮಿಸಲಾಗಿದೆ. ಪಿತೃಪಕ್ಷದ ಹಾಗೂ ಕುಂಭಮೇಳದ ಸಮಯದಲ್ಲಿ ತ್ರಿವೇಣಿ ಸಂಗಮಕ್ಕೆ ಭೇಟಿ ನೀಡುವ ಭಕ್ತರು, ಈ ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಕುಂಭಮೇಳ ನಡೆಯುವ ಸಂಗಮದ ಸ್ಥಳದಿಂದ ಒಂದೂವರೆ ಕಿ.ಮೀ ದೂರವಾಗುತ್ತದೆ. ಸೈಕಲ್ ರಿಕ್ಷಾ ಅಥವಾ ಆಟೋಗಳಲ್ಲಿ ಹೋಗಬಹುದು.

## ಹನುಮಾನ್ ದೇಗುಲ

ಗಂಗಾನದಿಯ ದಡದಲ್ಲಿರುವ ಹನುಮಾನ್ ದೇಗುಲದಲ್ಲಿ, ನದಿ ಉಕ್ಕಿ ಹರಿದಾಗ ನೀರು ಹನುಮಂತನ ವಿಗ್ರಹದ ಪಾದ ಸ್ಪರ್ಶಿಸಿ ಮುಂದಕ್ಕೆ ಹರಿಯುತ್ತದೆ. ನದಿ ಪ್ರವಾಹ ರೂಪಕ್ಕೆ ತಿರುಗಿದಾಗ ಒಮ್ಮೊಮ್ಮೆ ದೇವಾಲಯ



ಅಲಹಾಬಾದ್ ಕೋಟೆ



ಚಂದ್ರಶೇಖರ್ ಅಜಾದ್ ಸ್ಮಾರಕ

ಅರ್ಧ ಮುಳುಗುತ್ತದೆ. ದೇವಾಲಯದ ಪ್ರಾಂಗಣದಿಂದ ನದಿ ತೀರಕ್ಕೆ ಹೋಗಲು ಮೆಟ್ಟಿಲುಗಳಿವೆ. ಈ ಅಂಗಳದ ಕಟ್ಟೆಯ ಮೇಲೆ ಕುಳಿತರೆ ಎದುರಿಗೆ ಕುಂಭಮೇಳ ಚಟುವಟಿಕೆಗಳು ಕಾಣುತ್ತವೆ.

ಈ ದೇವಾಲಯದಲ್ಲಿ ಹನುಮನ ವಿಗ್ರಹ ಮಲಗಿದ ರೀತಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಹನುಮ ದೇವರಿಗೆ ಕುಂಕುಮಾರ್ಚನೆಯೇ ಶ್ರೇಷ್ಠ. ಹೀಗಾಗಿ ಇಲ್ಲಿಗೆ ಭೇಟಿ ನೀಡಿದ ಭಕ್ತರೆಲ್ಲ ಕುಂಕುಮದಿಂದಲೇ ದೇವರನ್ನು ಪೂಜಿಸುತ್ತಾರೆ. ಕುಂಭಮೇಳಕ್ಕೆ ಬಂದ ಬಹುತೇಕರು ಈ ದೇವಾಲಯಕ್ಕೆ ಭೇಟಿ ನೀಡುತ್ತಾರೆ

## ಅಲಹಾಬಾದ್ ಕೋಟೆ

ಅಲಹಾಬಾದ್‌ನ ಯಮುನಾ ನದಿಯ ಉತ್ತರಭಾಗದ ದಂಡೆಯ ಮೇಲಿದೆ ಅಲಹಾಬಾದ್ ಕೋಟೆ. ಮೊಘಲ್ ದೊರೆ ಅಕ್ಬರ್ 1583ರಲ್ಲಿ ನಿರ್ಮಿಸಿದ ಕೋಟೆ ಇದು. ಚಾರಿತ್ರಿಕವಾಗಿಯೂ ಮಹತ್ವದ ತಾಣವಾಗಿದೆ. ಈ ಕೋಟೆಯ ವಿನ್ಯಾಸ ಮತ್ತು ಸರಸ್ವತಿ ಉಗಮಸ್ಥಾನದಿಂದ ಇದು ಪ್ರವಾಸಿಗರಿಗೆ ಹೆಚ್ಚು ಆಕರ್ಷಣೀಯ ಸ್ಥಳ.

ಕೋಟೆಯ ಬೃಹತ್ ಗೋಡೆಗಳು ವಿಶಿಷ್ಟವಾಗಿವೆ. ಒಟ್ಟು ಮೂರು ದ್ವಾರಗಳಿವೆ. ಮೂರು ಗೋಪುರಗಳಿವೆ. ಕೋಟೆಯೊಳಗೆ ಅಶೋಕ ಸ್ತಂಭವಿದೆ. ಸಮೀಪದಲ್ಲೇ ಸರಸ್ವತಿ ನದಿ ಉಗಮ ಸ್ಥಾನವಿದೆ.

## ಖುಸ್ರು ಭಾಗ್

ಆಲ್‌ಫ್ರೆಡ್ ಪಾರ್ಕ್‌ನಷ್ಟೇ ಐತಿಹಾಸಿಕವಾದ ಉದ್ಯಾನ ಖುಸ್ರು ಭಾಗ್. ಮೊಘಲ್ ದೊರೆ ಜಹಂಗೀರ್ ಪುತ್ರ, ಶಹಜಾನ್ ಸಹೋದರ ರಾಜ ಖುಸ್ರೌ. ಈ ರಾಜನ ತಾಯಿ ಮತ್ತು ಸಹೋದರಿ ನೆನಪಿಗಾಗಿ ಗುಂಬಜ್‌ಗಳನ್ನು ಈ ಉದ್ಯಾನದಲ್ಲಿ ನಿರ್ಮಿಸಲಾಗಿದೆ.